# ಶರಣರ ಆರ್ಥಿಕ ಸಮಾನತೆ

Dr. Y. A. DEVARUSHI
Assistant Professor
Kannada Dept,
C.B. College BHALKI,
Dist: BIDAR, Karnataka State.585328

**ABSTRACT:**
*ಮಾನವ ಸಮಾಜದ ಬದುಕಿಗೆ ಆರ್ಥಿಕ ವ್ಯವಸ್ಥೆ ಅತ್ಯಗತ್ಯ ಹಾಗು ಅನಿವಾರ್ಯ. ಅಗತ್ಯಕ್ಕೆ ತಕ್ಕಷ್ಟು ಸಂಪತ್ತು ಇರದಿದ್ದರೆ ಬದುಕಿನಲ್ಲಿ ಬವಣೆ, ಬಡತನ, ಅಸಹಾಯಕತೆ, ಚಿಂತೆ ಮನೆ ಮಾಡುತ್ತದೆ. ಆರ್ಥಿಕ ಭದ್ರತೆಯಿಂದ ಸುಖ–ಸಂತೋಷ, ನೆಮ್ಮದಿ ಸಾಧ್ಯವಾಗುತ್ತದೆ. ಆದರೆ ಬದುಕಿಗೆ ಭೌತಿಕ ಸಂಪತ್ತೇ ಮುಖ್ಯವಲ್ಲ. ಅರ್ಥ ವ್ಯವಸ್ಥೆ ಎಂದರೆ ಸಾಮಾನ್ಯವಾದ ಅರ್ಥದಲ್ಲಿ ಹಣಕಾಸು ನಿರ್ವಹಣೆ ಎಂದರ್ಥ. ಮಾನವನ ಇಡೀ ಜೀನವದಲ್ಲಿ ಅರ್ಥವ್ಯವಸ್ಥೆ ಹಾಸು ಹೊಕ್ಕಾಗಿರುತ್ತದೆ. ಸುಸ್ಥಿರ ಆರ್ಥಿಕ ವ್ಯವಸ್ಥೆ ಆಯಾ ಸಮಾಜದ ಸ್ಥಿತಿಗತಿಯ ಸೂಚ್ಯಂಕವಾಗಿರುತ್ತದೆ. ಸದೃಢ ಆರ್ಥಿಕತೆ ಸದೃಢ ಸಮಾಜದ ಸಂಕೇತ. ಅರ್ಥ ವ್ಯವಸ್ಥೆಯ ಮೂಲ ಅಡಗಿರುವುದು ಅರ್ಥ ಸಂಪಾದನೆಯಲ್ಲಿಯೇ. ಅರ್ಥ ಸಂಪಾದನೆಯ ಮೂಲ ಅಡಗಿರುವುದು ದುಡಿಮೆಯಲ್ಲಿ. ಈ ದುಡಿಮೆಯನ್ನೇ ಶರಣರು 'ಕಾಯಕ' ಎಂದು ಕರೆದರು.*

---

**KEY WORDS:** *ಶರಣರ ವಚನಗಳಲ್ಲಿ ಮೂಡಿ ಬಂದಿರುವ ಆರ್ಥಿಕ ಚಿಂತನೆಗಳನ್ನು ಗುರುತಿಸುವುದು.*

---

## 1. INTRODUCTION

ಜಗತ್ತಿನ ಸಂಸಾರಕ್ಕಾಗಿ ಕುದಿಯುತ್ತ ಸತ್ಯ, ಶುದ್ಧವಾದ ಯಾವುದೇ ಉದ್ಯೋಗವನ್ನು ಕೈಗೊಂಡರೂ ಅದು ಕಾಯಕವಾಗುತ್ತದೆ. 'ಕಾಯಕವೇ ಕೈಲಾಸ'ವೆಂಬ (Work is worship) ಮಾತನ್ನು ಶರಣರು ಹೇಳಿದುದು ಈ ಅರ್ಥದಲ್ಲಿ. "ಶ್ರಮದಾನ" ಎಂಬ ಮಾತಿನಿಂದ ಉದ್ಯೋಗದ ಮಹತ್ವ ಹೆಚ್ಚಿಸಿ, ಆರ್ಥಿಕ ಸಮಾನತೆಯನ್ನು ತರಲು ಪ್ರಯತ್ನಿಸಿದವರು ಶರಣರು. ಸಮಾಜ ಸ್ವಯಂಪೂರ್ಣವಾಗಬೇಕಾದರೆ ಮತ್ತು ಸುಖಮಯವಾಗಬೇಕಾದರೆ ಎಲ್ಲರೂ ತಮ್ಮ ತಮ್ಮ ಉದ್ಯೋಗಗಳನ್ನು ಮಾಡಬೇಕು. ಕಾಯಕದ ಮಹತ್ವ ಅರಿಯಬೇಕು ಎಂದು ಶರಣರು ಸಾರಿ ಹೇಳಿದರು. ಕಾಯಕದಿಂದ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಸಾಧ್ಯವಾಗುತ್ತದೆ ಎಂಬುದು ಶರಣರ ವಿಚಾರವಾಗಿತ್ತು.

ಉತ್ಪಾದನೆ, ಅನುಭೋಗ ಕುರಿತು ಆ್ಯಡಂ ಸ್ಮಿಥ್ 18–19 ನೆಯ ಶತಮಾನದಲ್ಲಿ ತಿಳಿಸಿದ್ದಾರೆ. 18 ನೆಯ ಶತಮಾನದಲ್ಲಿ ಕಾರ್ಲ್ ಮಾರ್ಕ್ಸ್ ಕೂಡ ವರ್ಗ ತಾರತಮ್ಯಗಳನ್ನು ತೊಡೆದು ಹಾಕಲು ಹೋರಾಡಿದರು. ಅವರ ಸಮತಾವಾದವು ಅಂದು ರಷ್ಯಾ ಮೊದಲಾದ ದೇಶಗಳಲ್ಲಿ ಕ್ರಾಂತಿಯನ್ನೆ ಉಂಟು ಮಾಡಿತು. ಕಾರ್ಲ್ ಮಾರ್ಕ್ಸ್‌ನಕ್ಕಿಂತ ಪೂರ್ವದಲ್ಲಿಯೇ ಶರಣರು ಅರ್ಥ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲಿದ್ದರು. ಶರಣರ ಅರ್ಥ ತತ್ವಕ್ಕೆ ಎರಡು ಮಗ್ಗಲುಗಳುಂಟು (1) ಕಾಯಕ (2) ದಾಸೋಹ. ಕಾಯಕದಿಂದ ಗಳಿಸಬೇಕು, ದಾಸೋಹದಿಂದ ಬಳಸಬೇಕು. ಕಾಯಕ, ದಾಸೋಹ ಪರಿಕಲ್ಪನೆಗಳ ಮೂಲಕ ಮನುಕುಲಕ್ಕೆ ಬಹು ಮೌಲಿಕ ಕೊಡುಗೆ ನೀಡಿದ ಬಸವಾದಿ ಶರಣರು ಅವರ ಆರ್ಥಿಕ ಸಿದ್ಧಾಂತಗಳು ಇಂದಿಗೂ ದಾರಿ ದೀಪವಾಗಿವೆ ಹಾಗೂ ಪ್ರಸ್ತುತವಾಗಿವೆ. ಶರಣರು 12ನೆಯ ಶತಮಾನದಲ್ಲಿ ಆರ್ಥಿಕ ವ್ಯವಸ್ಥೆಯ ಬಗ್ಗೆ ಅಮೂಲಾಗ್ರವಾಗಿ ಚಿಂತಿಸಿದ್ದಾರೆ. ಶರಣರ ಆರ್ಥಿಕ ಚಿಂತನೆ ಇರುವುದು ಕಾಯಕ ತತ್ವದಲ್ಲಿ. ಶರಣರು ಜ್ಞಾನಕ್ಕಿಂತ ಕ್ರಿಯೆಗೆ ಹೆಚ್ಚಿನ ಮಹತ್ವ ನೀಡಿದ್ದರು. ಬಸವಣ್ಣ ಕಲ್ಯಾಣದ ಶ್ರೇಷ್ಠ ಪ್ರಧಾನ ಮಂತ್ರಿಯಾಗಿ 12 ನೆಯ ಶತಮಾನದಲ್ಲಿ ಆರ್ಥಿಕ ವ್ಯವಸ್ಥೆಗೆ ಭದ್ರ ಬುನಾದಿ ಹಾಕಿದರು. ಶರಣರ ಆರ್ಥಿಕ ಚಿಂತನೆ ಕಾಯಕ, ದಾಸೋಹ, ಪ್ರಸಾದ ಈ ಮೂರು ತತ್ವಗಳ ಮೇಲೆ ನಿಂತಿದೆ. ಕಾಯಕ ಎನ್ನುವುದು ಉತ್ಪಾದನಾ ವ್ಯವಸ್ಥೆಯಾದರೆ, ದಾಸೋಹ ಎನ್ನುವುದು ವಿತರಣಾ ವ್ಯವಸ್ಥೆ. ಪ್ರಸಾದ ಎಂಬುದು ಅನುಭೋಗವಾಗಿದೆ.

## 2. ಕಾಯಕ : ಉತ್ಪಾದನೆ (Production)

ಅರ್ಥಶಾಸ್ತ್ರವು ಸರಕು ಸೇವೆಗಳು ಉತ್ಪಾದನೆ, ವಿತರಣೆ ಮತ್ತು ಅನುಭೋಗಗಳೆಂಬ ಪ್ರಮುಖ ಅಂಶಗಳನ್ನು ಒಳಗೊಂಡಿರುತ್ತದೆ. ಉತ್ಪಾದನೆ ಎಂದರೆ ಮಾನವನ ಬಯಕೆಗಳನ್ನು ತೃಪ್ತಿಪಡಿಸುವುದರ ಸಲುವಾಗಿ ಕೈಗೊಳ್ಳುವ ಚಟುವಟಿಕೆಗಳು ಎಂದರ್ಥ. 12 ನೆಯ ಶತಮಾನದಲ್ಲಿ ಸಮಾಜ ಅಸಮಾನ ಸಾಮಾಜಿಕಾರ್ಥಿಕ ವ್ಯವಸ್ಥೆಯಿಂದ ಉಸಿರುಗಟ್ಟಿದ್ದರಿಂದಲೇ ಶರಣರು ಪರ್ಯಾಯ ಆರ್ಥಿಕ ಸಂಬಂಧಗಳನ್ನು ಕಟ್ಟುವುದಕ್ಕೆ ಗಮನಹರಿಸಿದರು. ಅಂದಿನ ಜಾತಿ ವ್ಯವಸ್ಥೆಯು ಆರ್ಥಿಕ ಸಂಗತಿಗಳನ್ನು ನಿಯಂತ್ರಿಸುವ ಬಹು ದೊಡ್ಡ ಶಕ್ತಿಯಾಗಿತ್ತು. ಮೇಲ್ಜಾತಿಯವರಿಗೆ ಎಲ್ಲಾ ಸೌಲಭ್ಯಗಳು ರಾಜನ ಮುಖಾಂತರ ಮತ್ತು ನೇರವಾಗಿ ಸಿಗುತ್ತಿದ್ದವು. ಯಾವುದೇ ರೀತಿಯ ತೆರಿಗೆ ಕಟ್ಟುವ ಬಂಧನವಿರಲಿಲ್ಲ. ಪೂಜೆ ಪುನಸ್ಕಾರಗಳನ್ನು ಮಾಡಿಕೊಂಡು ಮಂತ್ರ ಹೇಳಿಕೊಂಡು ದುಡಿಯಲಾರದೆಯೇ ಎಲ್ಲವನ್ನು ಪಡೆಯುವ ಅಧಿಕಾರ ಮತ್ತು ಹಕ್ಕು ಎರಡೂ ಇದ್ದವು. ಆದರೆ ಕೆಳಜಾತಿಯವರಿಗೆ ಎಷ್ಟು ದುಡಿದರೂ ಹೊಟ್ಟೆ ತುಂಬದ ಪರಿಸ್ಥಿತಿ. ಅದರ ಮೇಲೆ ಬರೆ ಎಳೆದಂತೆ ತೆರಿಗೆ ಕಟ್ಟುವ ದಿಗ್ಬಂಧನ. ಅದಕ್ಕಾಗಿಯೇ ಬಸವಣ್ಣನವರ ನೇತೃತ್ವದಲ್ಲಿ ಉತ್ಪಾದನೆಯ ಮೂಲ ಸ್ತಂಭಗಳಾದ ಶ್ರಮ ಜೀವಿಗಳು ಮಧ್ಯವರ್ತಿಗಳ ಕೈಯಲ್ಲಿ ಸಿಕ್ಕು ನರಳುವುದನ್ನು ತಪ್ಪಿಸಲು ಶರಣರು ಅವರವರ ಸಂಘಗಳನ್ನು ರಚಿಸಿದರು. ವಿಕೇಂದ್ರಿಕೃತ ಆರ್ಥಿಕತೆಯನ್ನು ಜಾರಿಗೆ ತಂದರು. ಜೊತೆಗೆ ತಾವು ಉತ್ಪಾದಿಸಿದ ವಸ್ತುಗಳು ಮಧ್ಯವರ್ತಿಗಳ ಕೈಯಲ್ಲಿ ಸಿಕ್ಕು ಗ್ರಾಹಕರೂ ವಂಚಿತರಾಗದಂತೆ, ಉತ್ಪಾದಿಸುವವರೂ ನಷ್ಟಕ್ಕೊಳಗಾಗದಂತೆ ಜಾತ್ರೆ,

ಸಂತೆಗಳನ್ನು ಸಂಘಟಿಸಿದರು. ಎಲ್ಲ ಆರ್ಥಿಕ ಅಸಮಾನತೆಯ ಮೂಲ ಬೇರಾದ ಜಾತಿಯನ್ನು ಪ್ರಜ್ಞಾಪೂರ್ವಕವಾಗಿ ಧಿಕ್ಕರಿಸಿ ಎಲ್ಲರನ್ನು ಒಂದಾಗಿಸಿ ಆರ್ಥಿಕ ಸಂಬಂಧಗಳನ್ನು ಗಟ್ಟಿಗೊಳಿಸಿದ ವಚನಕಾರರು ನಿಜವಾದ ಅರ್ಥಶಾಸ್ತ್ರಜ್ಞರು. ದುಡಿಯುವವರೆಲ್ಲರೂ ಸಮಾನರು ದೇವರು ಅವರಲ್ಲಿ ಮಾತ್ರ ಇರುತ್ತಾನೆ. ಅವರೇ ದೇವರೆಂದು ಹೇಳಿದರಲ್ಲದೆ ದುಡಿಯದೇ ಇರುವವರು ಭ್ರಷ್ಟರೆಂದು ಸಾರಿದರು. 'ಕಾಯಕ'ವೆಂಬ ಹೊಸ ಪರಿಭಾಷೆಯನ್ನು ನೀಡಿದರು. "ಕಾಯಕವೆಂಬುದು ತನು ಮನ ಬಳಲಿಸಿ ತಂದು ದಾಸೋಹವ ಮಾಡುವುದು"[1] ಎಲ್ಲರೂ ಸೇರಿ ದುಡಿದಾಗ ಉತ್ಪಾದನೆಯಲ್ಲೂ ಹೆಚ್ಚಳವಾಗಿ ಅದರ ಲಾಭಗಳೆಲ್ಲ ಸಮಾಜಕ್ಕೆ ವಿಸ್ತರಣೆಯಾಗುತ್ತವೆ. ಆಗ ಎಲ್ಲರೂ ಅದರ ಉಪಭೋಗಿಗಳಾಗುತ್ತಾರೆ. ಇದನ್ನೇ ಶರಣರು ಕಾಯಕ–ದಾಸೋಹವೆಂದರು. ಉತ್ಪಾದನೆ ಮತ್ತು ವಿತರಣೆಗಳು ಸಮಸ್ಥಿತಿಯಲ್ಲಿದ್ದಾಗ ಆರ್ಥಿಕ ಸಮಾನತೆ ಉಂಟಾಗುತ್ತದೆ. ಎಂದು ಸಾರಿದರು.

"ಗುರುವಾದಡೂ ಕಾಯಕದಿಂದಲೇ ಜೀವನ್ಮುಕ್ತಿ
ಲಿಂಗವಾದಡೂ ಕಾಯಕದಿಂದಲೇ ಶಿಲೆಯ ಕುಲ ಹರಿವುದು
ಜಂಗಮವಾದಡೂ ಕಾಯಕದಿಂದಲೇ ವೇಷದ ಪಾಶ ಹರಿವುದು"[2]

ಎಂದು ಸಾರಿದರು. ಕಾಯಕ ಮತ್ತು ದಾಸೋಹಗಳಿಂದ ಆರ್ಥಿಕ ಪ್ರಗತಿ ತಾನೇ ತಾನಾಗಿ ಸಾಧ್ಯವಾಗುತ್ತದೆ ಎಂದು ತಿಳಿಸಿದರು. "ಇಡೀ ಶರಣ ಸಮೂಹವನ್ನೇ ಎಚ್ಚರಿಸಿ ಸಾಕ್ಷಾತ್ ಕಾಯಕದ ಮಹತ್ವವನ್ನೇ ಅರಿವು ಮಾಡಿಕೊಟ್ಟ ನಿಷ್ಠುರ ಕಾಯಕವಾದಿ ಲಕ್ಕಮ್ಮ"[3] ಅದೇ ರೀತಿಯಾಗಿ "ನಿಜವಾದ ಭಕ್ತನಾಗಬೇಕೆಂದರೆ ಕಾಯಕ ಮಾಡಬೇಕು. ಮಡಿ ಬಟ್ಟೆ ಉಟ್ಟು, ಹಣೆಯ ಮೇಲೆ ವಿಭೂತಿ–ಗಂಧ ಧರಿಸಿ, ಲಿಂಗ ಪೂಜೆಯ ಮಾಡತ್ತ ಕಣ್ಮುಚ್ಚಿ ಧ್ಯಾನ ಮಾಡಿದರೆ ಆತ ಭಕ್ತನಾಗುವುದಿಲ್ಲ. ಭಕ್ತನಾಗಲು ಮೊದಲ ಮೆಟ್ಟಿಲು ಸದಾಚಾರ. ಅಂದರೆ ಯಾವಾಗಲೂ ಕಾಯಕದಲ್ಲಿ ನಿರತನಾಗಿರಬೇಕು."[4] ಎಂದು ಕಾಳವ್ವೆ ಹೇಳಿದ್ದಾಳೆ.

19ನೆಯ ಶತಮಾನದಲ್ಲಿ ಕಮ್ಯುನಿಷ್ಟ ತತ್ವಜ್ಞಾನಿ, ಕಾರ್ಲ್‌ಮಾರ್ಕ್ಸ "ಜಗತ್ತಿನ ಕಾರ್ಮಿಕರೆ ಒಂದಾಗಿರಿ, ನೀವು ಒಂದಾದರೆ ನಿಮ್ಮ ಸಂಕೋಲೆಗಳನ್ನು ಕಳೆದುಕೊಳ್ಳುವಿರಿ. ವಿನಹ ಬೇರೆ ಏನನ್ನು ನೀವು ಕಳೆದುಕೊಳ್ಳುವದಿಲ್ಲ" ಎಂದು ಹೇಳಿದ್ದಾನೆ. ಇವನಿಗಿಂತ ಮುಂಚೆ 12 ನೆಯ ಶತಮಾನದಲ್ಲಿ ಬಸವಣ್ಣನವರು ಬಾರಿ ತೆರಿಗೆ ಮತ್ತು ಸುಲಿಗೆಯಿಂದ ನರಳುತ್ತಿದ್ದ ಕಾಯಕ ಜೀವಿಗಳನ್ನು, ಅಸ್ಪೃಶ್ಯತೆಯಿಂದ ಬಳಲುತಿದ್ದ ದಲಿತರನ್ನು, ಎಲ್ಲ ಹಕ್ಕಗಳಿಂದ ವಂಚಿತರಾಗಿದ್ದ ಮಹಿಳೆಯರನ್ನೂ ವಿಮೋಚನೆ ದಾರಿ ಎಡೆಗೆ ತಂದರು. ಮಾನವನ ವ್ಯಕ್ತಿತ್ವ ವಿಕಸನಗೊಳ್ಳಬೇಕಾದರೆ ಮೊದಲಿಗೆ ಕಾಯಕ ಮಾಡಬೇಕು.

"ನಾನು ಆರಂಭವ ಮಾಡುವೆನ್ನಯ್ಯ ಗುರು ಪೂಜೆಗೆಂದು,
ನಾನು ಬೆವಹಾರದ ಮಾಡುವೆನಯ್ಯ ಲಿಂಗಾರ್ಚನೆಗೆಂದು.
ನಾನು ಪರಸೇವೆಯ ಮಾಡುವೆನಯ್ಯಾ ಜಂಗಮ ದಾಸೋಹಕ್ಕೆಂದು
ನಾನಾವ ಕರ್ಮಂಗಳ ಮಾಡಿದಡೆಯೂ ಆ ಕರ್ಮಫಲಭೋಗವ
ನೀ ಕೊಡುವೆಯೆಂಬುದ ನಾ ಬಲ್ಲೆನು
ನಿಮ್ಮ ಸೊಮ್ಮು ನಿಮಗೆ ಸಲ್ಲಿಸುವೆನು ನಿಮ್ಮಾಣೆ"[5]

ಎಂದು ಬಸವಣ್ಣನವರು ಹೇಳುವಾಗ ಕಾಯಕ ಕೇವಲ ಸ್ವಾವಲಂಬನೆಗಾಗಿ ಅಲ್ಲ. ಅದಕ್ಕೆ ತ್ರಿವಿಧ ದಾಸೋಹದ ಜವಾಬ್ದಾರಿಗಳಿವೆ ಎಂಬುದನ್ನು ಸೂಚಿಸುತ್ತಾರೆ. ನಮ್ಮ ಕಾಯಕದಿಂದ ಬಂದದ್ದನ್ನು ದೇವರ ಪ್ರಸಾದವಾಗಿ ಸ್ವೀಕರಿಸುವುದರ ಮೂಲಕ ಮೂಲ ಗಳಿಕೆಯ ಅಹಂನಿಂದ ಹೊರಬಂದು. ಆ ಗಳಿಸಿದ್ದನ್ನೆಲ್ಲ ನಮಗಾಗಿಯೇ ಖರ್ಚು ಮಾಡದೆ ಸಾಮಾಜಿಕ ಜವಾಬ್ದಾರಿಯನ್ನು ಸಮರ್ಪಣಾ ಭಾವದಿಂದ ನಿಭಾಯಿಸುವುದಕ್ಕೆ ಒಂದು ತತ್ವ ರೂಪಿಸಿದರು ಅದೇ 'ದಾಸೋಹ'. ಅಂತೆಯೇ ಶರಣ ಧರ್ಮದಲ್ಲಿ ಗುರು–ಲಿಂಗ–ಜಂಗಮಕ್ಕೂ ಕಾಯಕ–ಪ್ರಸಾದ–ದಾಸೋಹಕ್ಕೂ ಅವಿನಾಭಾವ ಸಂಬಂಧವಿದೆ. ಇವುಗಳನ್ನು ಪ್ರತಿಪಾದಿಸುವ ವಚನ ಸಾಹಿತ್ಯ ನಿಜವಾದ ಮಾನವೀಯ ಮೌಲ್ಯಗಳ ಸಾಹಿತ್ಯವಾಗಿದೆ. ವಚನಗಳು ಲೋಕ ಹಿತದ ಸಾಹಿತ್ಯ ಮತ್ತು ತತ್ವದ ಆಗರಗಳಾಗಿವೆ.

ಯೋಗ್ಯ ಉತ್ಪಾದನೆ, ಯೋಗ್ಯ ಬಳಕೆ ಮತ್ತು ಯೋಗ್ಯ ವಿತರಣೆ ಇವು ಮೂರು ಬಸವಣ್ಣನವರ ಅರ್ಥಶಾಸ್ತ್ರದ ಪ್ರಮುಖ ಅಂಶಗಳಾಗಿವೆ. ಶರಣರ ದೃಷ್ಟಿಯಲ್ಲಿ ಕಾಯಕವೆಂದರೆ ಯೋಗ್ಯವಾದದನ್ನು ಉತ್ಪಾದಿಸುವ ಕ್ರಿಯೆ. ಪ್ರಸಾದವೆಂದರೆ ಉತ್ಪಾದಿಸಿದ ವಸ್ತುವಿನ ಯೋಗ್ಯ ಬಳಕೆ. ದಾಸೋಹವೆಂದರೆ ಉತ್ಪಾದಿಸಿದ ವಸ್ತುವಿನ ಯೋಗ್ಯ ವಿತರಣೆ. ಈ ಮೂರು ಆರ್ಥಿಕ ಪ್ರಕ್ರಿಯೆಗಳನ್ನು ಶರಣರು ತಮ್ಮ ವಚನಗಳ ಮೂಲಕ ಪ್ರತಿಪಾದಿಸಿದ್ದಾರೆ. ವ್ಯಕ್ತಿ ಮಾಡುವ ಕಾಯಕ ಸತ್ಯ ಶುದ್ಧವಾಗಿರಬೇಕು, ಇಂತಹ ಸತ್ಯ ಶುದ್ಧ ಕಾಯಕದಿಂದ ಮನಸ್ಸು ಪವಿತ್ರವಾಗುತ್ತದೆ. ಆದ್ದರಿಂದ ಶರಣರ ಕಾಯಕ ತತ್ವ ವಿಶ್ವಮಾನ್ಯವಾಗಿದೆ.

ಶರಣರು ಕಾಯಕ ತತ್ವವನ್ನು ಮೈಗೂಡಿಸಿಕೊಂಡು ಉತ್ಪಾದನಾ ಶಕ್ತಿಯನ್ನು ಹೆಚ್ಚಿಸಿದರು. ಕಾಯಕದಿಂದ ದೇಶದ ಖಜಾನೆ ತುಂಬುವುದು, ಕಾಯಕದಲ್ಲಿ ಯಾವುದು ಮೇಲಿಲ್ಲ, ಕೀಳಿಲ್ಲ ಎಂದು ಸಾರಿದರು. ಬಡ್ಡಿ ರಹಿತ ಅರ್ಥಶಾಸ್ತ್ರವೊಂದೇ ಈ ಜಗತ್ತನ್ನು ಕಾಪಾಡಬಲ್ಲದು ಎಂದು ಅರಿತಿದ್ದ ಶರಣರು ಸಾಲ ಕೊಡುವುದಾದರೆ ಶರಣರಿಗೆ ಕೊಡಿ, ಆ ಸಾಲ ಮರಳಿ ಬಂದರೂ ಸರಿ, ಬರದಿದ್ದರೂ ಸರಿ ಎಂಬ ನಿಲುವನ್ನು ಶರಣರು ಹೊಂದಿದ್ದರು. ಜಗತ್ತಿನ ಎಲ್ಲ ಅರ್ಥಶಾಸ್ತ್ರಗಳು ಸೋತರು ಶರಣರ ಅರ್ಥಶಾಸ್ತ್ರ ಸೋಲುವುದಿಲ್ಲ.

"ಮನ ಶುದ್ಧವಿಲ್ಲದವರಿಗೆ ದ್ರವ್ಯದ ಬಡತನವಲ್ಲದೆ
ಚಿತ್ತ ಶುದ್ಧದಲ್ಲಿ ಕಾಯಕ ಮಾಡುವಲ್ಲಿ
ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು,
ಮಾರಯ್ಯ ಪ್ರಿಯ ಅಮರೇಶ್ವರಲಿಂಗದ ಸೇವೆಯುಳ್ಳನ್ನಕ್ಕ"[6]

ಎನ್ನುವ ಶರಣರ ವಾಣಿ ಅರ್ಥಶಾಸ್ತ್ರಕ್ಕೆ ಹಿಡಿದ ಕನ್ನಡಿಯಾಗಿದೆ. ವಚನಕಾರರ ಕಾಯಕ–ದಾಸೋಹ ಪ್ರಜ್ಞೆ ಇಂದಿನ ಜನರಲ್ಲಿ ಬಂದರೆ ಆರ್ಥಿಕ ಕುಸಿತ ದಿವಾಳಿಯಾವುದಿಲ್ಲ.

**3. ದಾಸೋಹ– ವಿತರಣೆ (Distribution)**

ಅರ್ಥಶಾಸ್ತ್ರಜ್ಞರು ಸುಂದರ ಬದುಕಿಗೆ ಭೌತಿಕ ಸಂಪತ್ತು ಅನಿವಾರ್ಯವೆಂದು ಹೇಳುತ್ತಾರೆ. ಆದರೆ ಶರಣರು ಬದುಕಿಗೆ ಬೇಕಾದ ಅರ್ಥವ್ಯವಸ್ಥೆ ಕುರಿತು ವಿಭಿನ್ನವಾಗಿ ಚಿಂತಿಸುತ್ತಾರೆ. ಆರ್ಥಿಕ ಕ್ರಾಂತಿಯ ಮೊಟ್ಟ ಮೊದಲ ರೂವಾರಿ ಬಸವಣ್ಣ ನೀಡಿದ ಆರ್ಥಿಕ ನೀತಿ ಪ್ರಗತಿಪರ ಅರ್ಥಶಾಸ್ತ್ರಜ್ಞರನ್ನು ದಂಗು ಬಡಿಸುತ್ತದೆ.

ಕಾಯಕ ಮತ್ತು ದಾಸೋಹ ಎಂಬ ಪರಿಕಲ್ಪನೆಗಳು ಶರಣರು ವಿಶ್ವಕ್ಕೆ ನೀಡಿದ ಉತ್ಕೃಷ್ಟ ಆರ್ಥಿಕ ಚಿಂತನೆಗಳಾಗಿವೆ. ಪ್ರತಿಯೊಬ್ಬ ವ್ಯಕ್ತಿ ಸತ್ಯ ಶುದ್ಧ ಮನಸ್ಸಿನಿಂದ ಕಾಯಕ ಮಾಡಬೇಕು. ಕಾಯಕದಿಂದ ಸಂಪಾದಿಸಿದ ಸಂಪತ್ತನ್ನು ತನಗೆ ತನ್ನವರಿಗೆ ಎಂದು ಸಂಗ್ರಹಿಸಿ ಇಡಲಾರದೆ ಜಂಗಮರೂಪಿ ಚೇತನ ಸಮಾಜಕ್ಕೆ ದಾಸೋಹದ ಮೂಲಕ ಸಮರ್ಪಿಸಬೇಕು. "ಆಡಿದಡೇನು, ಹಾಡಿದಡೇನು, ಓದಿದಡೇನು, ತ್ರಿವಿಧ ದಾಸೋಹವಿಲ್ಲದನ್ನಕ್ಕ? ಆಡದೆ ನವಿಲು? ಹಾಡದೆ ತಂತಿ? ಓದದೆ ಗಿಳಿ?"[7] ಎಂಬುದು ಬಸವಣ್ಣನವರ ಪ್ರಶ್ನೆ. ಹಿಗಾಗಿ ಸಂಪಾದನೆಯ ಸಾರ್ಥಕ್ಯ ದಾಸೋಹ ಮಾಡುವುದರಲ್ಲಿಯೇ ಎಂಬುದು ಶರಣರ ಅಭಿಪ್ರಾಯ. ತಾನು ಸಂಪಾದಿಸಿದ ಸಂಪತ್ತನ್ನು ತನಗಾಗಿ ತನ್ನವರಿಗಾಗಿ ಇಂದಿಂಗೆ–ನಾಳಿಂಗೆ ಬೇಕೆಂದು ಸಂಗ್ರಹಿಸುವುದರಿಂದ ಸಂಪತ್ತು ಒಂದೆಡೆ ಸೇರಿ ಬಡವ–ಶ್ರೀಮಂತ ಎಂಬ ವರ್ಗಭೇದ ಉಂಟಾಗಿ ಕಲಹಗಳಾಗುತ್ತವೆ ಎಂಬುದು ಶರಣ ನಿಲುವು. ಸಮಾಜದಿಂದ ಗಳಿಸಿದ ಸಂಪತ್ತು ಸಮಾಜೋದ್ಧಾರಕ್ಕೆ ವಿನಿಯೋಗವಾಗಬೇಕು.

"ನೀ ಕೊಟ್ಟ ದ್ರವ್ಯ ನಿಮಗಲ್ಲದೆ
ಮತ್ತೊಂದು ಕ್ರಿಯೆ ಮಾಡೆನು
ನಿಮ್ಮ ಸೊಮ್ಮಿಂಗೆ ಸವೆಸುವೇನು ನಿಮ್ಮಾಣೆ"[8]

ಕಾಯಕದಿಂದ ಗಳಿಸಿದ ಸಂಪತ್ತಿನಲ್ಲಿ ನಿಮಗೆ ಅಗತ್ಯವಾದಷ್ಟು ಇಟ್ಟುಕೊಂಡು ಉಳಿದದ್ದನ್ನು ದಾಸೋಹಕ್ಕೆ ನೀಡಬೇಕು. ದಾಸೋಹಕ್ಕೆ ಸಲ್ಲುವ ಧನವು ಸತ್ಯ–ಶುದ್ಧ ಕಾಯಕದಿಂದ ಗಳಿಸಿರಬೇಕು. ಕಳ್ಳತನ, ದುರ್ಮಾರ್ಗದಿಂದ ಗಳಿಸಿದ ದ್ರವ್ಯ ದಾಸೋಹಕ್ಕೆ ಸಲ್ಲದು.

"ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗೆ ಉಂಟೇ ಅಯ್ಯಾ?
ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೇ ಅಯ್ಯಾ?
ಈಸಕ್ಕಿಯ ಆಸೆ ನಿಮಗೇಕೆ? ಈಶ್ವರನೊಪ್ಪ
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ"[9]
ಎಂದು ಆಯ್ದಕ್ಕಿ ಲಕ್ಕಮ್ಮ ತನ್ನ ಗಂಡನನ್ನು ಪ್ರಶ್ನಿಸುತ್ತಾಳೆ ಮತ್ತು ಎಚ್ಚರಿಸುತ್ತಾಳೆ
"ಒಮ್ಮನವ ಮೀರಿ ಇಮ್ಮನವ ತಂದಿರಿ
ಇದು ನಿಮ್ಮ ಮನವೋ? ಬಸವಣ್ಣನ ಅನುಮಾನದ ಚಿತ್ತವೋ?
ಈ ಮಾತು ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ಸಲ್ಲದ ಬೋನ
ಅಲ್ಲಿಯೇ ಸುರಿದು ಬನ್ನಿ ಮಾರಯ್ಯ"[10]

ಕಾಯಕದ ಮಿತಿಗೆ ಮೀರಿದ ಆದಾಯ ಬೇಕಾಗಿಲ್ಲ ಹೆಚ್ಚಿನದನ್ನು ಅಲ್ಲಿಯೇ ಸುರಿದು ಬನ್ನಿರಿ ಎಂದು ಕಳುಹಿಸುತ್ತಾಳೆ. ಇದು ಶರಣರ ಆರ್ಥಿಕ ದೃಷ್ಟಿ. ಇಂದು ನಾವು ಇಷ್ಟು ತಂದರೆ ಇಷ್ಟೇ ತಂದಿದ್ದೀರಾ ಇನ್ನೊಂದಿಷ್ಟು ತರಬಾರದಾಗಿತ್ತೆ? ಎಂಬುದು ನಮ್ಮ ಹೊಟ್ಟೆಬಾಕ ಸಂಸ್ಕೃತಿಯನ್ನು ತಿಳಿಸುತ್ತದೆ. ಈ ಹೊಟ್ಟೆಬಾಕ ಸಂಸ್ಕೃತಿಯು ಆರ್ಥಿಕ ಅಸಮಾನತೆಯನ್ನು ಸೃಷ್ಟಿಸುತ್ತದೆ, ಅದಕ್ಕಾಗಿ ಶರಣರು ಇದನ್ನು ವಿರೋಧಿಸಿದರು.

**4. ಪ್ರಸಾದ: ಅನುಭೋಗ (Consumption)**

ಅನುಭೋಗ ಎಂದರೆ ಸರಕು, ಸೇವೆಗಳಲ್ಲಿರುವ ತುಷ್ಟಿಗುಣವನ್ನು ಅನುಭವಿಸುವುದು. ಗ್ರಾಹಕ ಸಂಸ್ಕೃತಿಯ ಕಾರಣದಿಂದ ಇಂದು ಅನುಭೋಗದ ವ್ಯಾಖ್ಯೆಗಳು ಬದಲಾಗಿವೆ. ಎಷ್ಟು ವಸ್ತುಗಳನ್ನು ಖರಿದಿಸಿದರೂ ಇನ್ನೂ ಬೇಕೆಂಬ ಆಶೆಯನ್ನು ಮಾರುಕಟ್ಟೆಗಳು ಸೃಷ್ಟಿಸುತ್ತಿವೆ. ಈ ವಸ್ತು ಭೋಗವನ್ನು ಶರಣರು 'ಭವಿತನ'ವೆಂದು ಕರೆದರು. ನಮಗೆ ಯಾವುದು ಎಷ್ಟು ಬೇಕೆಂಬುದನ್ನು ಅರಿತು ಸ್ವೀಕರಿಸುವುದೇ ಪ್ರಸಾದ, ಅದನ್ನರಿತು ನಡೆಯುವವನೇ ಶರಣ ಅಥವಾ ಭಕ್ತ, ನೆಲ, ಜಲ, ಆಹಾರ, ವಸ್ತು ಇತ್ಯಾದಿಗಳನ್ನು ಪ್ರಸಾದ ರೂಪದಲ್ಲಿ ಸ್ವೀಕರಿಸಬೇಕೆಂದು ಶರಣರು ಹೇಳುತ್ತಾರೆ. ಅರ್ಥಶಾಸ್ತ್ರಜ್ಞರು ಉತ್ಪಾದನೆ, ಮಿತವ್ಯಯ, ಕೊರತೆಗಳನ್ನು ಕುರಿತು ಸಾಕಷ್ಟು ಗ್ರಂಥಗಳನ್ನು ಬರೆದರೂ ಇದಕ್ಕೆ ತದ್ವಿರುದ್ಧವಾದ ಆರ್ಥಿಕತೆ ಜಾರಿಯಲ್ಲಿದೆ. ಇದು ಮುಂದಿನ ದಿನಮಾನಗಳಲ್ಲಿ ಭಯಾನಕ ಆರ್ಥಿಕ ದುಸ್ಥಿತಿಯನ್ನು ಸೃಷ್ಟಿಸುವುದರಲ್ಲಿ ಎರಡು ಮಾತಿಲ್ಲ. ಅದಕ್ಕಾಗಿಯೇ ಶರಣರು ಕೊರತೆಯ ನಿವಾರಣೆಗೆ ಮಿತವ್ಯಯವೇ ಔಷಧವೆಂದು ಸಾರಿದರು.

ಆನೆ ಕುದುರೆ ಭಂಡಾರವಿದ್ದಡೇನೋ? ತಾನುಂಬುದು
ಪಡಿಯಕ್ಕಿ. ಒಂದಾವಿನ ಹಾಲು, ಮಲಗುವುದಕರ್ಧಮಂಚ

ಆಯ್ದಕ್ಕಿ ಮಾರಯ್ಯನ ಈ ನುಡಿಗಳು ನಾವು ಯಾವುದನ್ನು ಎಷ್ಟು? ಹೇಗೆ? ಸ್ವೀಕರಿಸಬೇಕೆಂಬ ಪ್ರಸಾದ ತತ್ವವನ್ನು ತಿಳಿಸುತ್ತವೆ. ಅನವಶ್ಯಕ ವಸ್ತುಗಳ ಸಂಗ್ರಹಣೆಯನ್ನು ಶರಣರು ವಿರೋಧಿಸಿದರು. ಒಬ್ಬ ಶ್ರೀಮಂತನ ಮನೆಯಲ್ಲಿ 100 ಚೀಲ ಜೋಳ ಸಂಗ್ರಹಣೆಯಾದರೆ ಮತ್ತೊಂದು ಕಡೆ ಬೀಸಲು ಜೋಳವಿಲ್ಲದೆ, ಹಿಟ್ಟಿಲ್ಲದೆ ಉಪವಾಸ ಮಲಗುವ ಸ್ಥಿತಿ ನಿರ್ಮಾಣವಾಗುತ್ತದೆ.

**5. ಭ್ರಷ್ಟಾಚಾರ: (CORRUPTION)**

ಭ್ರಷ್ಟಾಚಾರದ ಬಗ್ಗೆ ಅನೇಕ ಚರ್ಚೆಗಳು ಇಂದು ನಡೆಯುತ್ತಿವೆ, ಭ್ರಷ್ಟಾಚಾರ ತಡೆಗೆ ಅನೇಕ ಕ್ರಮಗಳು ಜಾರಿಯಲ್ಲಿವೆ. ಆದರೂ ಭ್ರಷ್ಟಾಚಾರ ರಾಜಾರೋಷವಾಗಿ ಮೆರೆಯುತ್ತಿದೆ. ಭ್ರಷ್ಟಾಚಾರ ಆರ್ಥಿಕ ವ್ಯವಸ್ಥೆಗೆ ಮಾರಕ ಎಂಬ ಮಾತನ್ನು ಶರಣರು ಪ್ರತಿಪಾದಿಸುತ್ತಾರೆ. ಕೈಯಿಂದ

ತೆಗೆದುಕೊಳ್ಳುವುದಷ್ಟೇ ಲಂಚವಲ್ಲ. ಬೇರೆ ಬೇರೆ ಮೌಢ್ಯಗಳ ಹೆಸರಿನಿಂದ, ವಿದ್ಯೆಯ ಹೆಸರಿನಲ್ಲಿ ಜನರನ್ನು ನಂಬಿಸಿ ಅವರನ್ನು ಸುಲಿಗೆ ಮಾಡುವುದು ಕೂಡ ಶರಣರ ಪ್ರಕಾರ ಭ್ರಷ್ಟಾಚಾರ.

ಪೂಜೆ ಪುನಸ್ಕಾರಗಳನ್ನು ಮಾಡಿಕೊಂಡು ಯಾವುದೇ ರೀತಿಯ ತೆರಿಗೆಯನ್ನು ಕಟ್ಟದೆ, ದುಡಿಯದೇ ಸುಖವಾಗಿದ್ದವರು ಭ್ರಷ್ಟಾಚಾರದ ನೇರ ಫಲಾನುಭವಿಗಳಾಗಿದ್ದರು. ಒಂದು ಕಡೆ ದುಡಿದು ಹೈರಾಣಾಗಿ ತೆರಿಗೆಯನ್ನು ಕಟ್ಟಿ ಹೊಟ್ಟೆಯ ಹಸಿವು ನಿಗಿಸಿಕೊಳ್ಳದೇ ನರಕಯಾತನೆ ಅನುಭವಿಸುತ್ತಿದ್ದವರು ಇದ್ದರು. ಇದು ಇಂದಿಗೂ ಕೂಡ ಮುಂದುವರೆದಿದೆ. ಹೀಗೆ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ಅನುಭವಿಸುತ್ತ ಅನುತ್ಪಾದಕ ಕೆಲಸಗಳಲ್ಲಿ ತೊಡಗಿ ಕೊಂಡಿರುವುದೇ ನಿಜವಾದ ಭ್ರಷ್ಟಾಚಾರವೆಂದು ಶರಣರು ಸಾರಿದರು. ಭ್ರಷ್ಟಾಚಾರ ಮಾರ್ಗದಿಂದ ಗಳಿಸಿದ ಹಣವನ್ನು ಪಾಪದ ಧನವೆಂದು ಕರೆದರು.

"ಪಾಪಿಯ ಧನ, ಪ್ರಾಯಶ್ಚಿತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯಾ,
ನಾಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯಾ,
ನಮ್ಮ ಕೂಡಲ ಸಂಗನ ಶರಣರಿಗಲ್ಲದೆ
ಮಾಡುವ ಅರ್ಥ, ವ್ಯರ್ಥ ಕಂಡಯ್ಯಾ"[11]

ಎಂದು ಹೇಳಿದರು. ಬಸವಣ್ಣನವರು ಅನೇಕ ರೀತಿಯ ತೆರಿಗೆಗಳನ್ನು ಪ್ರಸ್ತಾಪಿಸಿದ್ದಾರೆ.

1) ಗುತ್ತಿಗೆ- ಭೂ ಸಾಗುವಳಿಯ ಗುತ್ತಿಗೆ ಮೇಲಣ ತೆರಿಗೆ
2) ತಿಳುವರಿಕೆ- ಭೂಮಿಯನ್ನು ರಕ್ಷಿಸಲು ವಿಕ್ಷಿಸುವ ತೆರಿಗೆ
3) ಆಪತ್ರಿಕೆ- ವಾರಸುದಾರರಿಲ್ಲದ ಸಂಪತ್ತನ್ನು ಬೊಕ್ಕಸಕ್ಕೆ ಸೇರಿಸುವುದು.
4) ದಂತ- ನೀರಾವರಿ ತೆರಿಗೆ
5) ಉಂಡಿಗೆ- ವಿಲಾಸಿ ಸರಕುಗಳ ಮೇಲಿನ ತೆರಿಗೆ
6) ಕವಣೆ – ಶಿಕ್ಷಣ ಶುಲ್ಕ
8) ಸಿದ್ಧ ಆದಾಯ- ಮಾಂಡಲಿಕರಿಂದ ಬರುವ ಕಪ್ಪ

ಹೀಗೆ ಉತ್ಪಾದನೆ-ಕಾಯಕ, ವಿತರಣೆ-ದಾಸೋಹ, ಅನುಭೋಗ-ಪ್ರಸಾದ, ಭ್ರಷ್ಟಾಚಾರ ಮುಂತಾದ ವಿಚಾರಗಳ ಮೂಲಕ ಶರಣರು ಆರ್ಥಿಕ ನೀತಿಗಳನ್ನು ಪ್ರತಿಪಾದಿಸಿ ಸಮಾಜದಲ್ಲಿ ಆರ್ಥಿಕ ಸಮಾನತೆ ತರಲು ಪ್ರಯತ್ನಿಸಿದರು. ಸಮಾಜದ ಅರ್ಥವ್ಯವಸ್ಥೆಗೆ ಸಂಬಂಧಿಸಿದ ಚಿಂತನೆ ಶರಣರ ವಚನಗಳಲ್ಲಿ ಹರಡಿಕೊಂಡಿದೆ.

## 6. CONCLUSION

ಶರಣರು ಸಾಮಾಜಿಕ, ಧಾರ್ಮಿಕ ಸಮಾನತೆಯ ಜೊತೆಗೆ ಆರ್ಥಿಕ ಸಮಾನತೆಗೂ ಮಹತ್ವ ನೀಡಿದ್ದರು. ಶರಣರು ಧಾರ್ಮಿಕ ಹಾಗೂ ಸಾಮಾಜಿಕ ವ್ಯವಸ್ಥೆಯನ್ನು ಪ್ರಧಾನವಾಗಿ ಪರಿಗಣಿಸಿದ್ದರು. ಅವರ ಸಾಮಾಜಿಕ ಹೋರಾಟದಲ್ಲಿ ಆರ್ಥಿಕ ಸಮಾನತೆಯೂ ಒಂದು ಮುಖ್ಯ ವಿಷಯವಾಗಿತ್ತು. ಒಬ್ಬ ಶರಣ ಶ್ರೇಷ್ಠನಿಂದ ಹಿಡಿದು ಒಬ್ಬ ಸಾಮಾನ್ಯ ಭಕ್ತನವರೆಗೂ ದುಡಿಯದೇ ಯಾರು ಉಣ್ಣುವಂತಿಲ್ಲ ಎಂದು ಹೇಳಿದರು. ಶರಣರು ಪ್ರತಿಪಾದಿಸಿದ ಆರ್ಥಿಕ ಸಮಾನತೆಯ ವಿಚಾರಗಳು ಸರ್ವಕಾಲಕ್ಕೂ ಪ್ರಸ್ತುತವಾಗಿವೆ. ಶರಣರ ಆರ್ಥಿಕ ಚಿಂತನೆಗಳ ಪ್ರಸ್ತುತತೆ ಇಂದಿನ ದಿನಮಾನಗಳಲ್ಲಿ ಅತ್ಯಾಶ್ಯಕವಾಗಿದೆ.

**ಅಡಿ ಟಿಪ್ಪಣಿಗಳು**

1. ವಚನ ನಿರ್ವಚನ: ಡಾ. ಪಿ. ವಿ. ನಾರಾಯಣ : 1990: ಪುಟ–156
2. ಶರಣರ ಅನುಭಾವ ಸಾಹಿತ್ಯ: ಡಾ. ಎಚ್. ತಿಪ್ಪೇರುದ್ರಸ್ವಾಮಿ: 1998: ಪುಟ–141
3. ದಲಿತ ವರ್ಗದ ಶರಣರು ಮತ್ತು ಶರಣೆಯರು: ಡಾ. ಮ. ನ. ಜವರಯ್ಯ:1997: ಪುಟ–270
4. ವಚನ ವೈಭವ: ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿ: 2009: ಪುಟ–107
5. ದಲಿತ ವರ್ಗದ ಶರಣರು ಮತ್ತು ಶರಣೆಯರು: ಡಾ. ಮ. ನ. ಜವರಯ್ಯ:1997: ಪುಟ–150
6. ವಚನ ವೈಭವ: ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿ: 2009: ಪುಟ–93
7. ಶರಣ ಸಂಪದ: ಪ್ರೊ. ಎನ್. ಉಮಾಪತಿ: 2004: ಪುಟ–16
8. ವಚನ ನಿರ್ವಚನ: ಡಾ. ಪಿ. ವಿ. ನಾರಾಯಣ: 1990: ಪುಟ–158
9. ಶರಣರ ಅನುಭಾವ ಸಾಹಿತ್ಯ: ಡಾ. ಎಚ್. ತಿಪ್ಪೇರುದ್ರಸ್ವಾಮಿ: 1998: ಪುಟ–143
10. ಅದೇ: ಪುಟ–144
11. ಶರಣರ ಅನುಭಾವ ಸಾಹಿತ್ಯ: ಡಾ. ಎಚ್. ತಿಪ್ಪೇರುದ್ರಸ್ವಾಮಿ: 1998: ಪುಟ–109